ಶ್ರೀ ಕೆ. ಶ್ರೀನಿವಾಸಗೌಡ :– ಬೇಗನೆ ಮಾಡಿಸಿಕೊಡಿ ಅಧ್ಯಕ್ಷರೇ,

ಅಧ್ಯಕ್ಷರು :– ಶ್ರೀ ಎಂ.ಆರ್. ಸೀತಾರಾಂರವರ ಗಮನಸೆಳೆಯುವ ಸೂಚನೆ ಇದೆ, ಅವರು ಸದನದಲ್ಲಿ ಇಲ್ಲ ಶ್ರೀ ಎಂ.ಕೆ. ಸೋಮಶೇಖರ್‌ರವರ ಗಮನಸೆಳೆಯುವ ಸೂಚನೆ ಇದೆ, ಅವರು ಸದನದಲ್ಲಿ ಇಲ್ಲ.

ಶ್ರೀ ಎಂ.ಟಿ.ಬಿ. ನಾಗರಾಜು :– ಮಾನ್ಯ ಅಧ್ಯಕ್ಷರೆ, ನನ್ನದು ಗಮನ ಸೆಳೆಯುವ ಸೂಚನೆ ಇದೆ. 25ನೇ ತಾರೀಖಿನದು ಇದೆ. ನಂದಗುಡಿ ಎಸ್‌ಇಜಡ್ ವಿಶೇಷ ಆರ್ಥಿಕ ಯೋಜನೆ ಬಗ್ಗೆ ಗಮನ ಸೆಳೆಯುವ ಸೂಚನೆ ಇದೆ. ನಾನು 25ನೇ ತಾರೀಖು ಎಂದು ಅರ್ಜಿ ಕೊಟ್ಟಿದ್ದೇನೆ.

ಅಧ್ಯಕ್ಷರು :– ಇವತ್ತು ಅಜೆಂಡಾದಲ್ಲಿ ಇರುವುದನ್ನು ಮಾತ್ರ ಕರೆದಿದ್ದೇನೆ. ನೀವು ಕೊಟ್ಟಿರುವುದನ್ನು ನಂತರ ನೋಡೋಣ. ಶಾಸನ ರಚನೆ ಇದೆಯೆಲ್ಲಾ. ನಿಮ್ಮ ಮೆಡಿಕಲ್ ಎಜುಕೇಷನ್ ಮಿನಿಸ್ಟರ್‌ದು, ಅದನ್ನಾದರೂ ತೆಗೆದುಕೊಳ್ಳಬಹುದಲ್ಲವೇ? ಮೆಡಿಕಲ್ ಎಜುಕೇಷನ್ ಮಿನಿಸ್ಟರ್‌ರವರನ್ನು ಕರೆಸಿ.

8. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಚಾರ

Sub : Presentation of Medium Tem Fiscal Plan along with the Budget.

ಶ್ರೀ ಎಂ.ಪಿ. ಪ್ರಕಾಶ್ :– ಮಾನ್ಯ ದೇಶಪಾಂಡೆಯವರು ಮಾತನಾಡುವುದಕ್ಕೆ ತೊಂದರೆ ಇದೆ, ನಮಗೆ ಮಧ್ಯಂತರ ವರದಿ ಬೇಕೆಂದು ಹೇಳಿದರು. ನಾನು ಈಗ ಅದನ್ನು ನೋಡಿದಾಗ ಒಂದು ಕಾಪಿ ಮಾತ್ರ ಸಿಕ್ಕಿತು. 2006–07ರ ಕಾಪಿ 2007–11ರ ನಡುವೆ ಬಂದಿರುವಂತಹ ಕಾಪಿ. ಇದನ್ನು ಮತ್ತೊಂದು ಸಾರಿ ಚೆಕ್ ಮಾಡುವುದಕ್ಕೆ ಕಳುಹಿಸಿದ್ದೇನೆ. ಬೇರೆ ಸದಸ್ಯರು ನಮ್ಮಲ್ಲಿ ಮಾತನಾಡುವುದಕ್ಕೆ ತಯಾರಿದ್ದರೆ ಅವರನ್ನು ಕೂಡ ತಾವು ಕರೆಯಬಹುದು.

ಶ್ರೀ ಆರ್.ವಿ. ದೇಶಪಾಂಡೆ :– I am not blocking the discussion. ಇದನ್ನು ನಾನೇ ಹೇಳುತ್ತೇನೆ. ನಿನ್ನೆ ಸಂಜೆ 7–30 ತನಕ I tried to get a copy of mid-term fiscal report. But it has not reached me. If it is not there, to provide it is a mandatory provision under the Fiscal Responsibility Act. Without the mid-

term fiscal plan how can we discuss? ತಾವೇ ಹೇಳಿ.

ಅಧ್ಯಕ್ಷರು :– ಹೇಳಬೇಕಾಗಿತ್ತು, ಅವರು ಮಾತನಾಡಲಿಲ್ಲ. ಅವರು ಏನು comply ಮಾಡುತ್ತಾರೆಂದು ನೋಡೋಣ.

ಶ್ರೀ ಜೆ.ವಿ. ಶ್ರೀರಾಮರೆಡ್ಡಿ :– ಮಾನ್ಯ ದೇಶಪಾಂಡೆವರೆ ಒಂದು ನಿಮಿಷ ತಾಳಿ. ಮಾನ್ಯ ದೇಶಪಾಂಡೆಯವರು ಹೇಳುವಂತದ್ದು, ಸಂವಿಧಾನಾತ್ಮಕವಾಗಿ ಕಾನೂನು ಬದ್ದವಾಗಿ ಸರಿಯಾಗಿರುತ್ತದೆ. ಆದರೆ ಚರ್ಚೆ ಪ್ರಾರಂಭವಾಗಿ ನಾಲ್ಕು ದಿನಗಳಾಗಿದೆ. ಈ ಬಗ್ಗೆ ಸುಮಾರು ಜನ ಸದಸ್ಯರುಗಳು ಮಾತನಾಡಿದ್ದಾರೆ. ಅವರು ಮಾತನಾಡಿರುವ ಕಾರಣಕೋಸ್ಕರ ಇದನ್ನು ಮಧ್ಯದಲ್ಲಿ ತಡೆಹಿಡಿಯುವುದಕ್ಕಾಗುವುದಿಲ್ಲ. ಅದು ಕಾನೂನು ಬದ್ದವಾಗಿಲ್ಲ ಎಂದು ಹೇಳಿ, ಮಧ್ಯದಲ್ಲಿ ನಿಲ್ಲಿಸುವುದು ಸರಿಯಲ್ಲ. ಹಾಗಾಗಿ ಮಾತನಾಡುತ್ತಿರುವವರು ಮಾತನಾಡಲಿ. ಆ ಮೇಲೆ ಸರ್ಕಾರ ಏನು ಉತ್ತರವನ್ನು ಕೊಡುತ್ತದೆಯೋ ಕೊಡಲಿ.

ಅಧ್ಯಕ್ಷರು :– ಮಾತನಾಡುವವರು ಮಾತನಾಡಲಿ. ....

ಶ್ರೀ ಆರ್.ವಿ. ದೇಶಪಾಂಡೆ :– ನಾನು ಏನು ಹೇಳುತ್ತೇನೆ, ಮಾನ್ಯ ನಮ್ಮ ಸ್ನೇಹಿತರಾದ ರೆಡ್ಡಿಯವರು discussion ಶುರುವಾಗಿ –3–4 ದಿನಗಳಾಗಿರುವುದು ನಿಜ. ಆದರೆ ಒಮ್ಮೆ ಒಂದು ಡಿಬೆಟ್ ಕೊಟ್ಟಾಗ ಅದನ್ನು ನಾವು ರೈಸ್ ಮಾಡಿದಾಗ, ಅದನ್ನು ನಿಮ್ಮ ಗಮನಕ್ಕೆ ತಂದಾಗ ಮಾನ್ಯ ಗೌರವಾನ್ವಿತರು ಹೇಳಿದ್ದಾರೆ. ಹೌದು ಇದು mandatary provision ಇದೆ ಎನ್ನುವಂತಹ ಮಾತನ್ನು ಅವರು ಹೇಳಿದರು. Without complying the mandatory provision ನಾವು discussion ಮಾಡಿದರೆ ಅದು ಸರಿಯಾಗುವುದಿಲ್ಲ. ಅದು illegal, unconstitutional ಆಗುತ್ತದೆ.

ಅಧ್ಯಕ್ಷರು :– ಈ ಬಗ್ಗೆ ಸಂಸದೀಯ ಸಚಿವರನ್ನು ಕೇಳೋಣ, ನೋಡೋಣ. ಅವರು ಬರಲಿ, ಏನಾದರೂ ಮಾತನಾಡೋಣ.

ಶ್ರೀ ಎಂ.ಪಿ. ಪ್ರಕಾಶ್ :– ತಾವು ಹೇಳುವುದನ್ನು ನಾವು ಸಂಪೂರ್ಣವಾಗಿ ಒಪ್ಪಿದ್ದೇವೆ. ಅದನ್ನು ನಾವು ಚೆಕ್ ಮಾಡಿಸುತ್ತಿದ್ದೆವು. ಮಾನ್ಯ ಶ್ರೀರಾಮರೆಡ್ಡಿಯವರು ಹೇಳಿದಂತೆ ನಾನು stall ಆಗಬಾರದು ಎನ್ನುವ ಕಾರಣಕ್ಕಾಗಿ ಈಗ ವಿತ್ತೀಯ ಕಾರ್ಯಕಲಾಪಗಳಿಗೆ ವಿಧೇಯಕಗಳನ್ನು ಮಂಡಿಸಿ ತೆಗೆದುಕೊಳ್ಳಬೇಕೆಂದು ಮಾಡಿದ್ದೆವು. ಸನ್ಮಾನ್ಯ ಆರೋಗ್ಯ ಸಚಿವರು ವಿಧಾನ ಪರಿಷತ್ತಿನಲ್ಲಿದ್ದಾರೆ. ಈಗ ಸದನವನ್ನು 12.45 ಗಂಟೆಗೆ adjourn ಮಾಡುವಂತಹ ಪದ್ಧತಿ ಇಲ್ಲ. ನಾವು ಬಿಎಸಿಯಲ್ಲಿ ಒಂದು ವ್ಯವಸ್ಥೆಯನ್ನು ಮಾಡಿಕೊಂಡಿದ್ದೇವೆ.

ಮಧ್ಯಾಹ್ನದ ಭೋಜನಕ್ಕಾಗಿ ವಿರಾಮ ಇಲ್ಲವೆಂದು ಸಹ ಹೇಳಿದ್ದೇವೆ. ಆದ್ದರಿಂದ ತಾವು ಮಾತನಾಡುವುದಕ್ಕೂ ಕೂಡ ಇಚ್ಛೆ ಇದ್ದರೆ ಮಾತನಾಡಲಿ. ಅದು ಇಲ್ಲದೇ ಇದ್ದರೆ ಬೇರೆಯವರು ಮಾತನಾಡುವುದಕ್ಕೆ ಇಷ್ಟಪಟ್ಟರೆ ಮಾತನಾಡಲಿ. ಮಾನ್ಯ ಶ್ರೀರಾಮಡ್ಡಿಯವರು ಮಾತನಾಡುತ್ತಾರೆ.

ಶ್ರೀ ಆರ್.ವಿ. ದೇಶಪಾಂಡೆ :– ಮಾನ್ಯ ಅಧ್ಯಕ್ಷರು ಎನು ಆದೇಶವನ್ನು ಕೊಡುತ್ತಾರೆ, ಅದಕ್ಕೆ ಒಪ್ಪುತ್ತೇವೆ. I am bound by that. ನಾನು ನಿಮ್ಮ ಗಮನಕ್ಕೆ ತರುತ್ತಿದ್ದೇನೆ. It is a mandatory provision. ನಾವು ಇಲ್ಲಿ ಎಲ್ಲಾ ಕಾನೂನುಗಳನ್ನು ಮಾಡಿದ್ದೇವೆ. ಕಾನೂನುಗಳನ್ನು ಮಾಡಿ ಇಲ್ಲಿ ಪಾಸು ಮಾಡಿದ್ದೇವೆ. ನಾವು ಕಾನೂನನ್ನು comply ಮಾಡದೇ ಇದ್ದರೆ ಹೇಗೆ? You should pull up the Government as to why they have not complied with it. ಆಗ ಬಜೆಟ್ ಏನು ಪ್ರೆಸೆಂಟಾಯಿತು, ಆಗಲೂ ಸಹ ನಾನು ಗಮನಕ್ಕೆ ತಂದಿದ್ದೆ. ಆಗ ಗೌರವಾನ್ವಿತ ಉಪಮುಖ್ಯಮಂತ್ರಿಗಳು ಏನು ಹೇಳಿದ್ದಾರೆಂದರೆ, the practice is to provide it at the time of discussion on Demands for Grants. ಆ ದಿನ ಅವರು ಹೇಳಬೇಕಾಗಿತ್ತು. It will help the members to initiate discussion on the demands.

ಶ್ರೀ ಎಂ.ಸಿ. ಪ್ರಕಾಶ್ :– ಮಾನ್ಯ ದೇಸಪಾಂಡೆಯವರೆ, ತಾವು ಮುಖ್ಯವಾದಂತಹ ವಿಷಯವನ್ನು ಎತ್ತಿದ್ದೀರಿ ಹೌದು. ಇದು ಒಂದು ಕ್ಷಮಾರ್ಹವಾಗಿರುವಂತಹ ಒಂದು ಪ್ರಸಂಗವೆಂದು ಅದನ್ನು ಕೈಬಿಟ್ಟು ಚರ್ಚೆ ಮಾಡುವುದಕ್ಕೆ ತಾವು ಅವಕಾಶವನ್ನು ಮಾಡಿಕೊಡಿ.

(ಗೊಂದಲ)

ಅಧ್ಯಕ್ಷರು :– ನೀವು ಮಾತನಾಡುವುದಕ್ಕೆ ಆಗದಿದ್ದರೆ ಬೇರೆಯವರು ಮಾತನಾಡಲಿ. Finance Minister ರವರು ಬರಲಿ.

ಶ್ರೀ ಸಿದ್ದರಾಮಯ್ಯ :– ಮಾನ್ಯ ಅಧ್ಯಕ್ಷರೆ, ನಮ್ಮದು discussion ಆಗಿಬಿಟ್ಟಿದೆ. We are half way through. It is a different aspect. But ನಾವು ಕೂಡ ಜನರಲ್ ಬಜೆಟ್ ಮೇಲೆ discussion ಮಾಡುವಾಗ ಇದನ್ನು ಮಾಡಿಲ್ಲವೆಂದು ನಾನು ಆಗಲೇ ಹೇಳಿದೆ. Fiscal Responsibility Act ಅನ್ನು ನೀವು comply ಮಾಡಿಲ್ಲ. Medium-term fiscal plan ನೀವು ಪ್ರತಿವರ್ಷ ಕೊಡಬೇಕು. ಸೆಕ್ಷನ್ 6ರ ಪ್ರಕಾರ ವರ್ಷಕ್ಕೆ ಎರಡು ಸಾರಿ ಇದರ ಬಗ್ಗೆ ರಿವ್ಯೂ ಮಾಡಬೇಕಾಗುತ್ತದೆ. ರಿವ್ಯೂ ಮಾಡಿದಂತಹ ರಿಪೋರ್ಟ್‌ನ್ನು ಸಹ ಎರಡು ಸದನಗಳ ಮುಂದಿಡಬೇಕಾಗುತ್ತದೆಂದು ಹೇಳಿದೆವು. ಅವರು ಏನು ಹೇಳಿದರು

ಎಂದರೆ, ಅವರು ಡಿಮ್ಯಾಂಡ್ಸ್ ಟೈಮ್‌ನಲ್ಲಿ ಇಡುತ್ತೇವೆ, ಚರ್ಚೆ ಪ್ರಾರಂಭ ಮಾಡುವುದಕ್ಕಿಂತ ಮುಂಚಿತವಾಗಿ ಇದನ್ನು ಇಲ್ಲಿ ರೈಸ್ ಮಾಡಬೇಕಾಗಿತ್ತು. ಮಾಡಿಲ್ಲವೆಂದು ನಾವು ಇಲ್ಲಿ ತಯಾರಾಗಿ ಬಂದು ನೋಡಿದಾಗ ನಾವು ಇಟ್ಟಿರಬಹುದು ಎಂದು ಅಂದುಕೊಂಡಿದ್ದೆವು. ಕೆಲವು ಪೇಪರ್‌ಗಳು ನಮಗೆ ಬರುವುದಿಲ್ಲ. 2007–11 ರಂದು ಇಲ್ಲಿ ಇಡಬೇಕಾಗಿತ್ತು. Fiscal Responsibility Act ನ್ನು ನಾವು ಏಕೆ ಮಾಡಿದ್ದೇವೆ? ಅದರ ಉದ್ದೇಶವೇನು? ಅದನ್ನು ಇಡದೇ ಇದ್ದರೆ ಹೇಗೆ?

ಅಧ್ಯಕ್ಷರು :– ಈಗ ಚರ್ಚೆಯನ್ನು ಮುಂದುವರಿಸೋಣ. ಆ ಬಗ್ಗೆ ಕೇಳೋಣ.

ಶ್ರೀ ಸಿದ್ದರಾಮಯ್ಯ :– ಈ ಬಗ್ಗೆ ನಮ್ಮದೇನು ತಕರಾರು ಇಲ್ಲ. ಈಗ ಎಲ್ಲಾ ಇಲ್ಲೀಗಲ್ ಆಗಿ ನಡೆದುಬಿಟ್ಟಿದೆ. ಇಲ್ಲೀಗಲ್ ಆಗಿ ನೀವು ಮಾಡಿಕೊಟ್ಟರೆ ಅದು ಹೇಗೆ?

ಅಧ್ಯಕ್ಷರು :– ಆ ಮಂಡನೆ ಮಾಡುವುದಕ್ಕೆ ಏನು ಎತ್ತಾ ಎಂದು ವಿಚಾರ ಮಾಡಬೇಕಲ್ಲವೇ?

ಶ್ರೀ ಸಿದ್ದರಾಮಯ್ಯ :– ಸರ್ಕಾರವನ್ನು ಹೀಗೆ ನಡೆಸಿಕೊಂಡು ಹೋದರೆ ನಾವು ಸುಮ್ಮನೆ ಇರಬೇಕೇ? ಎಲ್ಲಾ ಇಲ್ಲೀಗಲ್ ಆಗಿ ನಡೆಯುತ್ತಿದೆಯಲ್ಲಾ? Is it not the violation of the Fiscal Responsibility Act?

ಶ್ರೀ ಎಂ.ಪಿ. ಪ್ರಕಾಶ್ :– You have already committed violation for the last three days. There are certain members who are willing to initiate discussion on Demands.

(Interruptions)

ಶ್ರೀ ಸಿದ್ದರಾಮಯ್ಯ :– We are not coming in the way of their discussion. But the question is, can they continue the violation of Fiscal Responsibility Act?

(ಗೊಂದಲ)

ನಾವು ಇಲ್ಲಿ ಅನೇಕ ಸಲ ಸಂವಿಧಾನಾತ್ಮಕವಾದ ವಿಷಯಗಳನ್ನು ಪ್ರಸ್ತಾಪ ಮಾಡಿದಾಗ, "ಇಲ್ಲ ನಾವು ಈಗ ಮುಂದಕ್ಕೆ ಹೋಗಿದ್ದೇವೆ, ಈಗೇನು ಮಾಡುವುದಕ್ಕಾಗುವುದಿಲ್ಲ" ವೆಂದು ತಾವು ರೂಲಿಂಗ್ ಕೊಟ್ಟಿದ್ದೀರಿ, ನಮ್ಮ concern ಆ Act ಗೆ adhere ಆಗಿರಬೇಕು. ಒಂದು ಸಲ ಕೇಂದ್ರಸರ್ಕಾರದ ಜೊತೆ ಒಪ್ಪಿ ನೀವು ಹಿಂದಕ್ಕೆ ಹೋದರೆ,

you may lose the grants of Government of India, you will not be placed anywhere in the country's list. ಅಂಥ ಸ್ಥಿತಿಯನ್ನು ನಿರ್ಮಾಣ ಮಾಡಿಕೊಳ್ಳುವುದು ಬೇಡವೆಂದು ಹೇಳಿ, ನಿಮ್ಮ 4th and 5th years plan ಅನ್ನು ಇಲ್ಲಿ ಇಡಬೇಕು, ಆಗ ಬಜೆಟ್ ಅನ್ನು ಮಾಡಿಕೊಂಡು ಹೋಗಬೇಕು ಎಂದು ಹೇಳಿ ಆ ವರ್ಷದವರೆಗೆ 2010 ಮತ್ತು 2011 ನೇ ಇಸವಿಯವರೆಗೆ ನಷ್ಟ ಆಗದಂತೆ ಇರಲಿಕ್ಕೆ ಏನೇನು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೀರಿ, ಅದನ್ನು ಎಲ್ಲೆಲ್ಲಿ review ಮಾಡಿದ್ದೀರಿ, ಎಲ್ಲಿ deficit ಅನ್ನು ಕಡಿಮೆ ಮಾಡುವಿರಿ ಎಂಬುದನ್ನು ಸದನಕ್ಕೆ ತರುವುದು ನಿಮ್ಮ ಜವಾಬ್ದಾರಿ ಇತ್ತು. ದುರದೃಷ್ಟವಶಾತ್, ಈಗ ಅಲ್ಲಿಂದ ಮುಂದಕ್ಕೆ ನಾವು ಚರ್ಚೆ ಮಾಡಿದ್ದೇವೆ. ಈಗ ಆಕಸ್ಮಿಕವಾಗಿ ಇನ್ನು ಎರಡು ದಿವಸಗಳೊಳಗೆ ಬಜೆಟ್ ಪಾಸ್ ಆಗಬೇಕಾಗಿದೆ. ಮಾತನಾಡುವವರು, ಮಾತನಾಡುತ್ತಿರಲಿ. ಮಾನ್ಯ ಸಿದ್ದರಾಮಯ್ಯ, ದೇಶಪಾಂಡೆಯವರು ಅನುಭವಸ್ಥರು, ಈ ಸದನದಲ್ಲಿ ಮಂತ್ರಿಗಳಾಗಿ ಕೆಲಸ ಮಾಡಿರುವವರು, ಬಜೆಟ್ ಪಾಸ್ ಮಾಡುವುದನ್ನು ನಿಲ್ಲಿಸುವ ಮಟ್ಟಕ್ಕೆ ಬಹುಶಃ ಹೋಗಲಾರರೆಂದು ನಾನು ಭಾವಿಸಿದ್ದೇನೆ. There may be issues for all these things, issues ಇರಬಹುದು, ಹಾಗಾಗಿ ದಯಮಾಡಿ ಬೇರೆಯವರು ಮಾತನಾಡಲಿಕ್ಕೆ ಈ ಸದನಕ್ಕೆ ತಾವು ಅವಕಾಶವನ್ನು ಕೊಡಬೇಕು. We are half way.

ಶ್ರೀ ಎಸ್. ಸಿದ್ಧರಾಮಯ್ಯ :– ಈಗ ನಾನೇನು ಹೇಳಲಿಕ್ಕೆ ಇಚ್ಛಿಸುತ್ತೇನೆಂದರೆ ಈಗಾಗಲೇ ಚರ್ಚೆ ಆಗಿಹೋಗಿದೆ. 3–4 ದಿನಗಳು ಚರ್ಚೆಯಾಗಿದೆ. ನಾವು ಈಗಾಗಲೇ ನಾಲ್ಕು ತಿಂಗಳುಗಳಿಗೆ Vote on Account ಮಾಡಿಕೊಂಡಿದ್ದೇವೆ, ಹಣವನ್ನು ಖರ್ಚು ಮಾಡಿದ್ದಾರೆ. ಇನ್ನು 8 ತಿಂಗಳುಗಳಿಗೆ ಖರ್ಚು ಮಾಡುವುದಕ್ಕೋಸ್ಕರ ಈ Full Budget pass ಆಗಲಿಕ್ಕಾಗಿ ಈ ಬೇಡಿಕೆಗಳ ಮೇಲೆ ಚರ್ಚೆ ನಸೆಯುತ್ತಿದೆ. ಇದು ಬಜೆಟ್ ಮಂಡನೆಯಾಗುವಾಗಲೇ viloation ಆಗಿದೆ. ಇದಾದ ಮೇಲೆ ಕನಿಷ್ಠ ಹಣಕಾಸು ಸಚಿವರು ಡಿಮ್ಯಾಂಡ್ಸ್ ಇಡುವಾಗಲಾದರೂ ಅದರ ಜೊತೆಯಲ್ಲಾದರೂ ಇಡಬೇಕು. ನಾವು ಕೇವಲ ಕೇಂದ್ರ ಸರ್ಕಾರದೊಂದಿಗೆ ಒಡಬಂಡಿಕೆ ಮಾಡಿಕೊಳ್ಳುವುದು ಅಷ್ಟೇ ಅಲ್ಲ. It is our responsibility also. ಕೇಂದ್ರಸರ್ಕಾರದ 11ನೇ ಆಯೋಗದಲ್ಲಿ ಏತಕ್ಕೆ ಹೇಳಿದರು. ಎಲ್ಲಾ Fiscal Deficit ಬಹಳ ಜಾಸ್ತಿಯಾಗಿದೆ. 2001–02 ರಲ್ಲಿ more than 5% ಆಗಿತ್ತು. 2003 ರಲ್ಲಿ 4.2%, 2004–05 ರಲ್ಲಿ Fiscal Responsibility Act ನಲ್ಲಿ ಏನು ಹೇಳಿತ್ತು. ಅದೆಲ್ಲಾ deficit ಬಂದು ಎಲ್ಲಾ fulfill ಆಯಿತು. ಈಗ ಅದು ಹೋಗಬೇಕು. ಅದಕ್ಕೋಸ್ಕರ ಕರ್ನಾಟಕ್ಕೆ 2005–06 ನೇ Fiscal incentives

262-00 ಕೋಟಿ ರೂ.ಗಳು ಕೇಂದ್ರದಿಂದ ಬಂತು. ಆಮೇಲೆ Debt Consolidation ಗೆ 304–00 ಕೋಟಿ ರೂ.ಗಳು ಬಂತು. ಕಳೆದ ವರ್ಷ ಅದರ continuation ನಲ್ಲಿ 358 ಕೋಟಿ ರೂ.ಗಳು ಕೇಂದ್ರದಿಂದ ಬಂತು, ಒಟ್ಟು 948–00 ಕೋಟಿ ರೂ.ಗಳು ಕೇಂದ್ರ ಸರ್ಕಾರದಿಂದ ಬಂತು, because of the Debt Consolidation and since we have reduced the fiscal responsibility to less than 3%. ಮತ್ತೆ Revenue Deficit ಅನ್ನು ತೆಗೆದುಹಾಕಿದುದ್ದಕ್ಕೆ ಅದರ ಆರೋಗ್ಯ ಕೆಟ್ಟು ಹೋಗಬಾರದು. Financial discipline, ಹೋಗಬಾರದು ಹಣಕಾಸಿನ ಆರೋಗ್ಯ ಕೆಟ್ಟು ಹೋಗಬಾರದು, ಮತ್ತೆ ನಾವು ಆ deficit ಗೆ ಹೋಗಬಾರದು. ಆ ಕಾರಣದಿಂದ ಇದನ್ನು ಮಾಡಬೇಕೆಂದು ಕಾನೂನು ಮಾಡುವಾಗ It shall ಎಂಬ ಪದವನ್ನು ಜವಾಬ್ದಾರಿಯಿಂದ ಉಪಯೋಗಿಸಿರುವುದು. Is this not a viloation Mr. Prakash? ಒಪ್ಪಿಕೊಂಡಿದ್ದೇವೆ ಸರಿ. ಅದಕ್ಕೆ...

ಶ್ರೀ ಎಂ.ಪಿ. ಪ್ರಕಾಶ್ (ಮಾನ್ಯ ಗೃಹ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :– ಸನ್ಮಾನ್ಯ ಸಿದ್ದರಾಮಯ್ಯನವರಿಗೆ ಅರಿಕೆ ಮಾಡಿಕೊಳ್ಳುವುದು ಇಷ್ಟೇ. ಮಾಡಿರುವಂಥಾದ್ದು ಇದು ಕ್ಷಮಾರ್ಹವಾಗಿರತಕ್ಕಂಥ ಒಂದು ತಪ್ಪು. ನೀವು ಮಾತನಾಡುತ್ತಿರುವುದು ಸರಿಯಾದುದಲ್ಲವೆಂದು ನಾನು ಹೇಳುವುದಿಲ್ಲ. It shall be ಎಂಬ ಪದವನ್ನು ಇದರಲ್ಲಿ ಬಳಸಿರುವ ಕಾರಣಕ್ಕಾಗಿಯೇ ಅದನ್ನು ನಾವು ಕೊಡಬೇಕಾಗಿತ್ತು. ಅದನ್ನು ಕೊಟ್ಟಿದ್ದೇವೆ ಎಂಬುದನ್ನು ಮಾಹಿತಿ ಇರುವುದರಿಂದ ಅದನ್ನು ಹುಡುಕಿಸುತ್ತಿದ್ದೇವೆ. ಈಗ ವಿತ್ತೀಯ ಕಲಾಪಗಳು, Business Advisory Committee ಯಲ್ಲಿ ನಾವು ಮಾತನಾಡಿದ ಸಂದರ್ಭದಲ್ಲಿ ಈ ವಿತ್ತೀಯ ಕಲಾಪಗಳು ಮುಕ್ತಾಯ ಆಗಿದೆ ಎಂಬ ಮಾತನ್ನು ಹೇಳಿದ್ದೇವು. ಅಜೆಂಡಾದಲ್ಲಿ ಈ ವಿಚಾರಗಳೆಲ್ಲಾ ಬಂದಿವೆ, ಇದನ್ನು ನಾವು ಈಗ ಮುಗಿಸಬೇಕು. ತಾವು ದಯಮಾಡಿ ಚರ್ಚೆ ಮಾಡಿ.

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ :– Violation of the Law ಆಗಿದೆ. Whatever you will direct, we will do according to that. ಮಾನ್ಯ ಅಧ್ಯಕ್ಷರೇ ತಮ್ಮ ಅಭಿಪ್ರಾಯವನ್ನು ಹೇಳಿ.

ಶ್ರೀ ಎಂ.ಪಿ. ಪ್ರಕಾಶ್ :– Violation ಆಗಿರುವುದನ್ನು ಗಮನಿಸಿ, we discussed demands for the last three days.

ಅಧ್ಯಕ್ಷರು :– ಹಣಕಾಸಿನ ಸಚಿವರು ಬರಲಿ, ಅವರನ್ನು ಕೇಳಿಬಿಟ್ಟು ನಾನು ನಿರ್ಧಾರ ಮಾಡುತ್ತೇನೆ. ಆಯಿತು.

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ :– Finally you have admitted. We have left it to the Hon'ble Speaker now.

ಶ್ರೀ ಎಂ.ಪಿ. ಪ್ರಕಾಶ್ :– ಅದನ್ನೇ ಮತ್ತೆ ಮತ್ತೆ ಮಾತನಾಡುವುದರಲ್ಲಿ ಅರ್ಥ ಇಲ್ಲ, ಅದನ್ನು ಬಿಟ್ಟುಬಿಡಿ.

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :– ಮಾನ್ಯ ಅಧ್ಯಕ್ಷರೇ, negligence on the part of the Government cannot be a violation of law.

ಶ್ರೀ ಎಂ.ಪಿ. ಪ್ರಕಾಶ್ :– ಸನ್ಮಾನ್ಯ ಅಧ್ಯಕ್ಷರೇ, ಇದೊಂದು ಕ್ಷಮಾರ್ಹವಾಗಿದೆ. ನಿಯಮಾವಳಿಗಳಿಗಿರುವಂಥದ್ದನ್ನು ಕೈಬಿಟ್ಟು ತಾವು ಸದನ ಕಾರ್ಯಕಲಾಪಗಳನ್ನು ತೆಗೆದುಕೊಳ್ಳಬೇಕು.

(ಗೊಂದಲ)

ಅಧ್ಯಕ್ಷರು :– ಆಯಿತು, ಅವರ ಅಭಿಪ್ರಾಯವನ್ನು ತೆಗೆದುಕೊಂಡು ನಿರ್ಣಯಿಸೋಣ ಬೇರೆಯವರು ಅಲ್ಲಿಯವರೆಗೆ ಮಾತನಾಡಲಿ, ದೇಶಪಾಂಡೆಯವರೇ ನೀವೇ ಮಾತನಾಡುವುದಿದ್ದರೆ ಮಾತನಾಡಿ.

ಶ್ರೀ ಆರ್.ವಿ. ದೇಶಪಾಂಡೆ :– ನಾನು ಮಾತನಾಡುತ್ತೇನೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :– Negligence ಆದರೆ common manಗೆ ನೀವು ಶಿಕ್ಷೆ ಕೊಡುವುದಿಲ್ಲವೇ? ಸರ್ಕಾರದಲ್ಲಿ ಆದರೆ ಏಕಿಲ್ಲ.

ಶ್ರೀ ಆರ್.ವಿ. ದೇಶಪಾಂಡೆ :– Government ತಪ್ಪು ಮಾಡಿದರೆ ಏನು ಮಾಡಬೇಕು?

ಶ್ರೀ ಎಸ್. ಸಿದ್ದರಾಯಮ್ಮ :– Ignorance of law is not an excuse. ಮರ್ಡರ್ ಮಾಡಿದರೆ Section 302 ಅಡಿಯಲ್ಲಿ ಜೀವಾವಧಿ ಶಿಕ್ಷೆಯಾಗುತ್ತದೆ. ಅದರಿಂದ ಇದರಲ್ಲಿ ಸ್ವಲ್ಪ negligence ಆಗಿದೆ ಎನ್ನಬಹುದೇ?

ಅಧ್ಯಕ್ಷರು :– ಆಯಿತು, ಈಗ ದೇಶಪಾಂಡೆಯವರು ಮಾತನಾಡುತ್ತಾರೆ. ಕೇಳಿ.

ಶ್ರೀ ಎಂ.ಪಿ. ಪ್ರಕಾಶ್ :– ಬೇರೆ ಏನು ಆಗಲಿಕ್ಕೆ ಇಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ :– Fiscal Responsibility Act ಪಾಸಾಗಿದ್ದು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಡುವೆ ಒಂದು ಒಡಬಂಡಿಕೆಯ ಮೇಲೆ. ನಾವು ಇಷ್ಟು ವರ್ಷದಲ್ಲಿ ಡೆಫಿಸಿಟ್ ಇಲ್ಲದ ಹಾಗೆ ಸರ್ಕಾರಗಳನ್ನು ನಡೆಸುತ್ತೇವೆ. The States will adhere to that decision. Fiscal Responsibility Act ನ್ನು under the Constitutional provision ಪಾಸ್ ಮಾಡಿದ್ದೇವೆ. ನಾವು ಪದೇ ಪದೇ ಹೇಳುತ್ತಾ ಬಂದೆವು. ಲಾಸ್ ಇಲ್ಲದೇ ನೋಡಿಕೊಳ್ಳಿ. ದುಡ್ಡು ಇದೆ ಎಂದು ಬಹಳ ಖರ್ಚು ಮಾಡಬೇಡಿ. We have agreed and you have committed to abide by the Fiscal Responsibility Act. Fiscal Responsibility Act ಪ್ರಕಾರ ನಾವು Mid term plan ಅನ್ನು ಇಲ್ಲಿ place ಮಾಡಬೇಕು. ನಮ್ಮ ಉದ್ದೇಶ ಏನಿದೆ, ನಾವು 10ನೇ ಇಸವಿಯೊಳಗೆ ನಷ್ಟ ಇಲ್ಲದಂತಹ ಅಥವಾ ಡೆಫಿಸಿಟ್ ಇಲ್ಲದಂತಹ ಬಜೆಟ್‌ನ್ನು ನಡೆಸಿಕೊಂಡು ಹೋಗಬೇಕೆಂದು ಹೇಳಿ ಸರ್ಕಾರದವರು ನಮಗೆ ಹೇಳಬೇಕಾಗಿತ್ತು. ಅವರಿಗೆ ಇದು ಒಂದು ಜವಾಬ್ದಾರಿ. This Fiscal Responsibility Act is not original Constitution Act. It is an Act based on the provisions of the Constitution. ಇಂತಹ ಅನೇಕ provision ಗಳು ಇಂತಹ ಅನೇಕ Act ಗಳನ್ನು ನಾವು ಈ ಸದನದಲ್ಲಿ ಬೈಪಾಸ್ ಮಾಡಿ ಮುಂದಕ್ಕೆ ಹೋಗಿದ್ದೇವೆ. ನಾವು ಅನೇಕ ಸಲ ಬೇರೆ ಬೇರೆ ಸಂವಿಧಾನಾತ್ಮಕವಾದಂತಹ ವಿಷಯಗಳನ್ನು ಎತ್ತಿದಾಗ ತಾವು ರೂಲಿಂಗ್‌ನ್ನು ಕೊಟ್ಟಿದ್ದೀರಿ.

ಶ್ರೀ ಕೆ. ಶ್ರೀನಿವಾಸಗೌಡ :– Negligence ಬಗ್ಗೆ ನಿಮ್ಮ ಅಧಿಕಾರಿಗಳು ಇದ್ದಾರೆ. ಕಾನೂನು violation ಆಗುತ್ತಿದೆಯೆಂದು ಹೇಳುವಷ್ಟು ಅಧಿಕಾರಿಗಳಿಗೆ ಸೋಮಾರಿತನವಿದೆಯೇ?

ಶ್ರೀ ಎಂ.ಪಿ. ಪ್ರಕಾಶ್ :– ಈ ವಿಚಾರವನ್ನು ತಾವು ಪ್ರಸ್ತಾಪ ಮಾಡಿದ್ದೀರಿ, ಇದೊಂದು ಕ್ಷಮಾರ್ಹವಾಗಿರುವಂಥದ್ದು ಎಂದು ಪರಿಗಣಿಸಬೇಕು, ಕಳೆದ ಮೂರು ದಿವಸಗಳಿಂದ ನಾವು ಮಾತನಾಡುತ್ತಿದ್ದೇವೆಂದು ಹೇಳಿದ್ದೇವೆ. ಇನ್ನಾರಾದರೂ ಮಾತನಾಡುವುದಿದ್ದರೆ ಮಾತನಾಡಲಿ. ಅವರಿಗೆ ಮಾತನಾಡಲಿಕ್ಕೆ ಇಷ್ಟವಿಲ್ಲದಿದ್ದರೆ ಅವರು ಕುಳಿತುಕೊಳ್ಳಲಿ. ಎಷ್ಟು ಸಾರಿ ನಾನು ಹೇಳುವುದು, ತಪ್ಪಾಗಿದೆ ಎಂದು ನಾವು ನೂರು ಸಾರಿ ಹೇಳಬೇಕೆ?

(ಗೊಂದಲ)

ಅಧ್ಯಕ್ಷರು :– ಪ್ರಕಾಶ್‌ರವರೆ, at the same time, you have to pull up your Officers of the Finance department, ಈಗೇನಾಗಿದೆ, ಕೆಲವನ್ನು political leaders ನೋಡಿರುವುದಿಲ್ಲ, ಹೀಗೆ ಆಗುತ್ತದೆ, ಅವರಿಗೆ ಗೊತ್ತಿರುವುದಿಲ್ಲ. ನಿಮ್ಮ ಅಧಿಕಾರಿಗಳು ಏನು ಮಾಡುತ್ತಿರುತ್ತಾರೆ? See, mandatory provisions ಪ್ರಕಾರ ಅವರು ಕೆಲಸ ಮಾಡಬೇಕೆಂದು ಅಡ್ವೈಸ್ ಮಾಡದಿದ್ದರೆ ಹೇಗೆ? that is realty very bad. ಮಾತನಾಡಿ. ನೋಡೋಣ, ಹಣಕಾಸಿನ ಸಚಿವರು ಏನು ಹೇಳುತ್ತಾರೆ ನೋಡೋಣ.

ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ್) :– ಈಗ ಮಾನ್ಯ ಕಾನೂನು ಸಚಿವರು ಹೇಳಿದ ಹಾಗೆ ನಾವು discussion ಆಗಬೇಕು ಎಂದು ಹೇಳಿಲ್ಲ. ಈಗ Meaningful discussion ಆಗಬೇಕು. The political philosophy should not over ride the financial discipline. The budget needs transparency. ಹೀಗಾಗಿ ನಾವು ಮಾಡಿದ್ದು, ಈಗ ತಾವು ಆದೇಶ ಕೊಟ್ಟಿದ್ದೀರಿ ನಾನು ಮಾತನಾಡುತ್ತಿದ್ದೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ :– ಯಾರು ಮಾತನಾಡುತ್ತಿದ್ದಾರೆಂಬುದು ನಮಗೆ ಗೊತ್ತಾಗುತ್ತಿಲ್ಲ.

ಶ್ರೀ ವಾಟಾಳ್ ನಾಗರಾಜ್ :– ಯಾರು ಮಾತನಾಡುತ್ತಿದ್ದಾರೆ? ಗೊತ್ತಿಲ್ಲ. ದೇಶಪಾಂಡೆಯವರಿಗೆ ಮಾತನಾಡಲಿಕ್ಕೆ ಅವಕಾಶ ಕೊಟ್ಟಿದ್ದೀರಾ ಅಧ್ಯಕ್ಷರೇ?

ಅಧ್ಯಕ್ಷರು :– ಅವರು ಬೇರೆ ಕಡೆ ಹೋಗಬೇಕೆಂದು ಸಮಯ ತೆಗೆದುಕೊಂಡಿದ್ದಾರೆ, ಆಮೇಲೆ ನಿಮಗೆ ಅವಕಾಶ ಕೊಡುತ್ತೇನೆ, ತಾವು ಕುಳಿತುಕೊಳ್ಳಿ. ಅವರೆಲ್ಲೋ ಹೋಗಬೇಕೆಂದಿದ್ದಾರೆ. ಅದಕ್ಕೆ ಅವರಿಗೆ ಅವಕಾಶ ಕೊಟ್ಟಿದ್ದೇನೆ.

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ :– ನಾನು ಏನೋ mention ಮಾಡುತ್ತೇನೆ, ವಾಟಾಳ್ ನಾಗರಾಜ್ ಆಮೇಲೆ ಮಾತನಾಡಲಿ ಎಂದು ಹೇಳಿದ್ದಿರಿ.

(ಗೊಂದಲ)

ಅಧ್ಯಕ್ಷರು :– ದೇಶಪಾಂಡೆಯವರು ಎಲ್ಲೋ urgent ಹೋಗಬೇಕೆಂದು ಹೇಳಿ ಮಾತನಾಡಲಿಕ್ಕೆ ಕೇಳಿದರು. ತಮಗೆ ಆಮೇಲೆ ಅವಕಾಶ ಕೊಡುತ್ತೇನೆ. No, no, ಆ ತರಹ ಅಲ್ಲ, ದಿನಕ್ಕೆ ಒಬ್ಬರಾದ ಮೇಲೆ ಒಬ್ಬರಿಗೆ ಅವಕಾಶ ಕೊಡುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ :– He has only told that he will only make a mentin. That is on record. ದೇಶಪಾಂಡೆಯವರು ರೆಕಾರ್ಡ್‌ನಲ್ಲಿ ಏನೋ mention ಮಾಡುತ್ತಿದ್ದೇನೆ ವಾಟಾಳ್‌ರವರೇ ಎಂದು ಹೇಳಿ, ಈಗ ಅವರಿಗೆ ನೀವು ಮಾತನಾಡಿ ಎಂದರೆ ಹೇಗೆ?

ಶ್ರೀ ಆರ್.ವಿ. ದೇಶಪಾಂಡೆ :– ನಾನು mention ಮಾಡುತ್ತೇನೆಂದು ಹೇಳಿದೆ, ಆಯಿತು, Please, co operate for a minute, ನಂತರ ಬೇಕಾದರೆ ಮಾತನಾಡಿ, ನೀವು discussions stop ಮಾಡಿದಿರಿ, ಬೇರೆ ಸಬ್ಜೆಕ್ಟ್ ತೆಗೆದುಕೊಂಡಿರಿ. Becasue you also may be convinced. ಬೇರೆ business ತೆಗೆದುಕೊಂಡ ನಂತರ, ನೀವು ಮಾತನಾಡಿ ಎಂದು ಪ್ರಕಾಶ್‌ರವರು ಹೇಳಿದರು. ತಾವು ನನಗೆ ಮಾತನಾಡಿ ಎಂದು ಹೇಳಿದ್ದರಿಂದ ನಾನು ಮಾತನಾಡುತ್ತಿದ್ದೇನೆ, ಒಂದು ವೇಳೆ ನಾನು ಮಾತನಾಡಬಾರದು, ಅವರು ಮಾತನಾಡುವುದಿದ್ದರೆ ನನ್ನದೇನೂ ತಕರಾರು ಇಲ್ಲ, ಅವರೇ ಮಾತನಾಡಲಿ, ಆದರೆ ತಾವು ನನಗೆ ಮಾತನಾಡಿ ಎಂದಿದ್ದರಿಂದ ನಾನು ನಿಂತಿದ್ದೇನೆ. ನಿರ್ಣಯವನ್ನು ತಮಗೆ ಬಿಡುತ್ತೇನೆ, ತಾವೇನು ನಿರ್ಣಯ ತೆಗೆದುಕೊಳ್ಳುತ್ತೀರಿ, ಅದರ ಪ್ರಕಾರ ನಾನು ಮಾಡುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ :– ಮಾನ್ಯ ಅಧ್ಯಕ್ಷರೆ, ಎರಡು issues, ಇದನ್ನು ಹಣಕಾಸು ಸಚಿವರು ಬಂದು ಅವರಿಗೆ convince ಮಾಡುವವರೆಗೆ ಅವರು ಇರಲಿ, ವಾಟಾಳ್ ನಾಗರಾಜ್‌ರವರು ಮಾತನಾಡುತ್ತಿರಲಿ, ಅವರು ಅವರ ಅಧಿಕಾರಿಗಳೊಂದಿಗೆ ಚರ್ಚೆ ಮಾಡಲಿ. ಏಕೆ ತಪ್ಪಾಯಿತು ಎಂದು ತಿಳಿದುಕೊಳ್ಳಲಿ. ಒಂದು ನಿಮಿಷ, ನೀವು ಆಮೇಲೆ ಮಾತನಾಡಿ.

ಶ್ರೀ ಆರ್.ವಿ. ದೇಶಪಾಂಡೆ :– ಪರವಾಗಿಲ್ಲ, ನಾನು ಆಮೇಲೆ ಮಾತನಾಡುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ :– ಒಂದು ನಿಮಿಷ, ತಾವು ಆಮೇಲೆ ಮಾತನಾಡಿ ತಾವೇ ಹೇಳಿದ್ದೀರಿ, ವಾಟಾಳ್ ನಾಗರಾಜ್‌ರವರು..

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ :– ತಾವು ಹೇಳಿಬಿಟ್ಟು ಕುಳಿತುಕೊಳ್ಳುತ್ತೇನೆಂದು ಹೇಳಿದ್ದೀರಿ.

ಶ್ರೀ ಆರ್.ವಿ. ದೇಶಪಾಂಡೆ :– Discussions stop ಆದ ಮೇಲೆ ಪುನಃ ನನಗೆ ಮಾತನಾಡಲಿಕ್ಕೆ ಅವರಿ ಹೇಳಿದುರು. ಅಧ್ಯಕ್ಷರೇ, I leave it to you, ನೀವು ಏನು decide ಮಾಡುತ್ತೀರೋ ಮಾಡಿ.

ಶ್ರೀ ಜೆ.ಸಿ. ಮಾಧುಸ್ವಾಮಿ :– ಅಧ್ಯಕ್ಷರೇ, ತಾವು ವಾಟಾಳ್ ನಾಗರಾಜ್‌ರವರನ್ನು ಕರೆದಿದ್ದೀರಿ. ಒಂದು mention ಮಾಡುತ್ತೇನೆಂದು ದೇಶಪಾಂಡೆಯವರು ನಿಂತವರು, ನೀವು ಇಲ್ಲವೆಂದರೆ ನಾವು ಮಾತನಾಡುವುದಿಲ್ಲ.

ಶ್ರೀ ಆರ್.ವಿ. ದೇಶಪಾಂಡೆ :– Finance minister ಬಂದಿದ್ದಾರೆ. ಪ್ರಶ್ನೆಗೆ ಉತ್ತರ ಕೊಡಬಹುದಲ್ಲಾ?

ಶ್ರೀ ಜೆ.ಸಿ. ಮಾಧುಸ್ವಾಮಿ :– ಹಣಕಾಸಿನ ಸಚಿವರು ಚರ್ಚೆ ಮಾಡಿ ಮಧ್ಯಾಹ್ನ ಉತ್ತರ ಕೊಡಲಿ, ಈಗ ವಾಟಾಳ್ ನಾಗರಾಜ್‌ರವರು ಮಾತನಾಡಲಿ.

ಶ್ರೀ ಆರ್.ವಿ. ದೇಶಪಾಂಡೆ :– Finance Minister ಬಂದಿದ್ದಾರೆ. ಅವರಿಗೆ ಗೊತ್ತಿದೆ, let him reply that point.

ಶ್ರೀ ಬಿ.ಎಸ್. ಯಡಿಯೂರಪ್ಪ :– ಸನ್ಮಾನ್ಯ ಅಧ್ಯಕ್ಷರೇ, ಕರ್ನಾಟಕ ಮಧ್ಯಮಾವಧಿ ವಿತ್ತೀಯ ಯೋಜನೆ ಬಗ್ಗೆ 2007–11 ಇದ್ದುದನ್ನು ಪ್ರಕಟಣೆ ಮಾಡಿಲ್ಲ. ರೆಡಿಯಾಗುತ್ತಿದೆ. ಸ್ವಲ್ಪ ಕೊರತೆಯಾಗಿದೆ, ಅದು ತಮಗೆ ಗೊತ್ತಿದೆ, ಸುಬ್ರಹ್ಮಣ್ಯ ಹೋದರು, ನಾನು ಪ್ರಾಮಾಣಿಕವಾಗಿ ಹೇಳಬೇಕೆಂದರೆ ಸ್ವಲ್ಪ ಕೊರತೆಯಾಗಿದೆ. ನಾಳೆ ಬೆಳಿಗ್ಗೆ ಸದನ ಪ್ರಾರಂಭವಾಗುವ ಮುಂಚೆ ಇದನ್ನು ನಾವು ಮಂಡಿಸುತ್ತೇವೆ. ಈಗ ಚರ್ಚೆ ಮುಂದುವರೆಯಲಿ. 100% ಸರಿಯಿದೆ. ಇದನ್ನು ಸರಿಪಡಿಸುತ್ತೇನೆ. ನಾಳೆಯೇ ಇದನ್ನು ಮಂಡಿಸುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ :– ಈಗ ತಪ್ಪಾಗಿರುವ ಬಗ್ಗೆ ತಾವು ಒಪ್ಪಿಕೊಳ್ಳುತ್ತಿರುವಿರಿ.

ಶ್ರೀ ಎಸ್. ಸಿದ್ಧರಾಮಯ್ಯ :– ಬಜೆಟ್ ಮೇಲೆ ಚರ್ಚೆ ಮಾಡುವಾಗ ನೀವು ಉತ್ತರ ಕೊಡುವಾಗ ಹೇಳಿದ್ದೀರಿ, ಡಿಮ್ಯಾಂಡ್ಸ್ ಮೇಲೆ ಮಾಡುವಾಗ ಅದನ್ನು ಕೊಡುತ್ತೇವೆಂದು ಹೇಳಿದಿರಿ.

ಶ್ರೀ ಬಿ.ಎಸ್. ಯಡಿಯೂರಪ್ಪ :– ನಾಳೆ ಬೆಳಿಗ್ಗೆ ಈ ಸದನ ಪ್ರಾರಂಭವಾಗುವುದಕ್ಕೆ ಮುಂಚಿತವಾಗಿಯೇ ಕೊಡುತ್ತೇವೆ.

ಶ್ರೀ ಎಸ್. ಸಿದ್ಧರಾಮಯ್ಯ :– ನಾಳೆ ಎಲ್ಲಾ ಚರ್ಚೆ ಮುಗಿದ ಮೇಲೆ ಕೊಟ್ಟರೆ ಏನು ಪ್ರಯೋಜನ? ನೀವು Fiscal Responsibility Act ಓದಿ.

ಅಧ್ಯಕ್ಷರು :– ಈಗ ಅರ್ಥ ಮಂತ್ರಿಗಳೂ ಹೇಳಿದ್ದಾರೆ, ಬಿಡಿ, ವಾಟಾಳ್ ನಾಗರಾಜ್‌ರವರು ದಯಮಾಡಿ ಅರ್ಧಗಂಟೆಯಲ್ಲಿ ಮಾತನಾಡಿ ಮುಗಿಸಬೇಕು.

1–00 ಪಿ.ಎಂ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) :– ಮಾತನಾಡುತ್ತೇನೆ, ನಾನು ಇನ್ನೂ ಪ್ರಾರಂಭವೇ ಮಾಡಿಲ್ಲ, ನಮಗೆ ಸ್ವಲ್ಪ, ಒಂದು ಅರ್ಧ ಗಂಟೆ ಆದಮೇಲೆ ಹೇಳಿ, ಮೊದಲೇ ಹೇಳಿದರೆ ಹೇಗೆ?

ಅಧ್ಯಕ್ಷರು :– ನಿಮ್ಮೊಬ್ಬರಿಗಲ್ಲ, ಎಲ್ಲರೂ ಅಷ್ಟೆ, ಯಾರೇ ಆಗಲಿ ಅರ್ಧ ಗಂಟೆ ಮೇಲೆ ಮಾತನಾಡಬಾರದು.

ಶ್ರೀ ದಿನೇಶ್ ಗುಂಡೂರಾವ್ :– ಹಿರಿಯರದ್ದೆಲ್ಲಾ ಆದಮೇಲೆ ನಮಗೂ ಮಾತನಾಡಲು ಅವಕಾಶ ಕೊಡಬೇಕು. ಅವರಿಗೆ ಕಾಲಮಿತಿ ಹಾಕಬೇಕು. ಎಲ್ಲರಿಗೂ ಅವಕಾಶ ಕೊಡಬೇಕು.

ಅಧ್ಯಕ್ಷರು :– ಮುಂದಿನವರ ಗಲಾಟೆಯಲ್ಲಿ ಹಿಂದಿನವರೆಲ್ಲಾ ತಬ್ಬಲಿಗಳಾಗಿ ಬಿಟ್ಟಿದ್ದೀರಿ.

9. ವಿತ್ತೀಯ ಕಾರ್ಯಕಲಾಪ :

2007–2008ನೇ ಸಾಲಿನ ಅನುದಾನ ಬೇಡಿಕೆಗಳ ಮೇಲಿನ ಚರ್ಚೆ

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) :– ಬೇಡಿಕೆಗಳ ಬಗ್ಗೆ ಇಲ್ಲಿ ಸಮಗ್ರವಾಗಿ ಚರ್ಚೆಗೆ ತಾವು ಎಲ್ಲಾ ಇಲಾಖೆಗಳ ಬೇಡಿಕೆಗಳನ್ನು ಒಟ್ಟಿಗೆ ಹಾಕಿದ್ದೀರಿ. ಸಾಮಾನ್ಯವಾಗಿ ಹಿಂದೆ ಒಂದೊಂದೂ ಇಲಾಖೆಯ ಬೇಡಿಕೆ ಚರ್ಚೆಯಾದಮೇಲೆ ಸಂಬಂಧಪಟ್ಟ ಮಂತ್ರಿಗಳು ಉತ್ತರ ಕೊಟ್ಟು ಮತದಾನವನ್ನು ಪಡೆಯುತ್ತಿದ್ದದ್ದು ಮೊದಲಿನಿಂದಲೂ ಬಂದ ಬಹಳ ವರ್ಷದ ಪದ್ಧತಿ. ಸಧ್ಯ ಸಂತೋಷ ಎಂದರೆ ಏನೂ ಚರ್ಚೆಯಾಗದೇ ಹೋದ ಸಾರಿ ಮುಂದೆ ಹೋದಂತೆ ಈ ಸಾರಿ ಆಗಿಲ್ಲ. ಏನೂ ಯಾವ ಬೇಡಿಕೆಯೂ ಚರ್ಚೆಯಾಗದೇ ಹೋದ ಸಲ ಹೋದಂತೆ ಈ ಸಲ ಹೋಗಲಿಲ್ಲ. ಅಷ್ಟಕ್ಕಾದರೂ ಸಂತೋಷ ಪಡಬೇಕಾಗಿದೆ. ತಾವು ಎಲ್ಲಾ ಇಲಾಖೆಯನ್ನು ಒಟ್ಟಿಗೆ ಹಾಕಿದ್ದೀರಿ. ಆದರೂ ಸಂತೋಷ. ಈಗ ಮುಖ್ಯವಾಗಿ ಕಂದಾಯ ಸಚಿವರು ತಮ್ಮ ಇಲಾಖೆಯು ವಿಚಾರದಲ್ಲಿ ಮಾತನಾಡುವಾಗ ತಹಶೀಲ್ದಾರರು, ಶಿರಸ್ತೇದಾರರು, ಕಂದಾಯ ನಿರೀಕ್ಷಕರು, ಗ್ರಾಮಲೆಕ್ಕಿಗರು, ಗ್ರಾಮಸಹಾಯಕರು, ತಾಲ್ಲೂಕು ಕಛೇರಿಯೇನಿದೆ, ಅದು ಬಹಳ ಸತ್ಯವಾಗಿರಬೇಕು. ತಾಲ್ಲೂಕು ಕಛೇರಿ ಏನಿದೆ, ಅದು ಬಹಳ ಪ್ರಾಮಾಣಿಕವಾಗಿ, ಸತ್ಯವಾಗಿ ತೀರ ಜನರ ಹತ್ತಿರ ಇರತಕ್ಕದ್ದು. ಅದು ಜನರ ಜೊತೆಯಲ್ಲಿ ಸೇರಿ ಬಹಳ ಹತ್ತಿರವಾಗಿರತಕ್ಕ ಒಂದು ಕಾರ್ಯಾಲಯ, ಸರ್ಕಾರಕ್ಕೆ ಏನಾದರೂ ಸರ್ಕಾರದ ಕಾರ್ಯಕ್ರಮಗಳು ಜಾರಿ ಆಗಲಿಲ್ಲವೆಂದರೆ ಅಲ್ಲಿಂದಲೇ ಶುರು ಆಗಬೇಕಾಗಿರತಕ್ಕದ್ದು. ಇದು ಹೆಚ್ಚಿನ ರೀತಿಯಲ್ಲಿ ಸರ್ಕಾರ ತಾಲ್ಲೂಕು ಕಾರ್ಯಾಲಯಗಳನ್ನು